





ಬಯಸುವ ಯುವತಿಯರು ಜೀನ್ಸ್‌ನಲ್ಲೂ ಹೊಸತನವನ್ನು ಬಯಸುತ್ತಿದ್ದಾರೆ. ಅದಕ್ಕೆ ತಕ್ಕಂತೆ ವಸ್ತ್ರವಿನ್ಯಾಸಕಾರರು ಹೊಸ ಹೊಸ ಪ್ರಯೋಗಗಳನ್ನು ನಡೆಸುತ್ತಲೇ ಬರುತ್ತಿದ್ದಾರೆ.

## ಏನಿದು ರಫೆಲ್ ಜೀನ್ಸ್?

ರಫೆಲ್ ಜೀನ್ಸ್ ಎಂದರೆ ಜೀನ್ಸ್ ಪ್ಯಾಂಟ್‌ಗೆ ನೆರಿಗೆಗಳನ್ನು ಅಳವಡಿಸುವ ಕಲೆ. ಜೀನ್ಸ್ ಪ್ಯಾಂಟ್‌ನ ಮಂಡಿಯ ಭಾಗದಿಂದ ಹಿಡಿದು ಕೆಳಕ್ಕೆ ಅದೇ ಜೀನ್ಸ್ ಬಟ್ಟೆಯಿಂದ ನೆರಿಗೆಗಳನ್ನು ಅಳವಡಿಸುವುದು. ನಮಗೆ ಬೇಕಾದ ರೀತಿಯಲ್ಲಿ ಜಾಸ್ತಿ ನೆರಿಗೆ, ಕಡಿಮೆ ನೆರಿಗೆ ಅಳವಡಿಸಿ ಧರಿಸುವುದು ಇಂದಿನ ಫ್ಯಾಷನ್. ಈ ನೆರಿಗೆಗೆ ಬೇಕಾಗುವ ಬಟ್ಟೆಯನ್ನು 2 ಇಂಚು, 4 ಇಂಚು, 6 ಇಂಚುಗಳ ಅಳತೆಯಲ್ಲಿ ಕತ್ತರಿಸಿ ನೀಟಾಗಿ ಜೀನ್ಸ್ ಪ್ಯಾಂಟ್‌ಗೆ ಅಳವಡಿಸಲಾಗುತ್ತದೆ.

ಮೊದಲೆಲ್ಲಾ ಬರೀ ಸೀರೆಗೆ ಮಾತ್ರ ಅಳವಡಿಸಲಾಗುತ್ತಿದ್ದ ನೆರಿಗೆಗಳು ಇತ್ತೀಚೆಗೆ ಜೀನ್ಸ್‌ಗಳಿಗೂ ಕೂಡ ಅಳವಡಿಸಲಾಗುತ್ತಿದೆ. ಇದೀಗ ಬಾಲಿವುಡ್‌ನ ಫ್ಯಾಷನ್ ದೀವಾಗಳೆಂದೇ ಹೆಸರುವಾಸಿಯಾಗಿರುವ ಸೋನಂ ಕಪೂರ್, ದೀಪಿಕಾ ಪಡುಕೋಣೆ, ಜಾಕ್ವೆಲಿನ್ ಇವರೆಲ್ಲರೂ ಇದೀಗ ರಫೆಲ್ ಜೀನ್ಸ್‌ನ ಚೆಂದಕ್ಕೆ ಮಾರು ಹೋಗಿ ಇದನ್ನೇ ಧರಿಸುತ್ತಿದ್ದಾರೆ. ಯಾವಾಗಲೂ ಉಡುಪುಗಳಲ್ಲಿ ಪ್ರಯೋಗಗಳನ್ನು ಬಯಸುವ ಈ ನಟಿಯರಿಗೆ ಈ ಶೈಲಿಯ ಜೀನ್ಸ್ ಕೂಡ ಚೆಂದದ ಫ್ಯಾಷನ್ ಪ್ರಯೋಗವೇ ಎನಿಸಿದೆ.

ರಫಲ್ ಜೀನ್ಸ್‌ನಲ್ಲಿ ಸಾಕಷ್ಟು ವೈವಿಧ್ಯಗಳಿವೆ. ಅವುಗಳಲ್ಲಿ ಪ್ರಮುಖವಾಗಿ ಸ್ವಡ್ ರಫಲ್ ಜೀನ್ಸ್. ಜೀನ್ಸ್ ಪ್ಯಾಂಟ್‌ನ ಎರಡೂ ಬದಿಗಳಲ್ಲಿ ಮೇಲಿಂದ ಪ್ಯಾಂಟ್‌ನ ತುದಿಯವರೆಗೂ ನೆರಿಗೆಗಳು ಜೋತುಕೊಂಡಂತೆ ಇರುತ್ತವೆ. ಈ ನೆರಿಗೆಗಳಲ್ಲಿ ಪ್ಯಾಚ್ ವರ್ಕ್ ಕೂಡ ಇರುವುದು ಜೀನ್ಸ್‌ಗೆ ಮತ್ತೊಂದು ಹೊಸ ಲುಕ್ ನೀಡಿದೆ.

ಹಾಗೇ ಹಿಪ್ಪಿಗಳ ಶೈಲಿಯ ಜೀನ್ಸ್‌ಗಳು ಕೂಡ ಇದೀಗ ಟ್ರೆಂಡಿಯಾಗಿವೆ. ಇವುಗಳಲ್ಲಿ ಜೀನ್ಸ್‌ಗಳ ನೆರಿಗೆಗೆ ಮಾತ್ರ ಬೇರೆ ಬಟ್ಟೆಯನ್ನು ಬಳಸಿ ವಿನ್ಯಾಸಗೊಳಿಸುವುದು ರಫಲ್ ಜೀನ್ಸ್‌ನ ಮತ್ತೊಂದು ಶೈಲಿ. ದಿನಂಪ್ರತಿ ಒಂದೇ ಬಗೆಯ ಜೀನ್ಸ್ ತೊಟ್ಟು ಬೇಸರ ಬಂದಿರುವ ಯುವತಿಯರು ಈ ರಫಲ್ ಜೀನ್ಸ್ ಪ್ರಯೋಗಿಸಿ ನೋಡಬಹುದು.

ಮೊದಲ ಬಾರಿಗೆ ಈ ತರಹದ ಪ್ರಯೋಗಕ್ಕೆ ಇಳಿದ ಯುವತಿಯರಿಗೆ ಕೆಲವೊಂದು ಟಿಪ್ಸ್

- ಈ ತರಹದ ಜೀನ್ಸ್‌ಗೆ ತಕ್ಕಂತೆ ಧರಿಸುವ ಟಾಪ್‌ನಲ್ಲೂ ವೆರೈಟಿ ಇದ್ದರೆ ಚೆನ್ನ.
- ಯಾವುದೇ ವೆರೈಟಿ ಬಟ್ಟೆಯಲ್ಲಿ ದೊರೆಯುವ ಟಾಪ್‌ಗಳ ತೋಳಿಗೆ, ಕತ್ತಿನ ಭಾಗದಲ್ಲಿ ನೆರಿಗೆ ಇರುವಂಥ ರಫಲ್ ಮಾದರಿಯ ಟಾಪ್‌ಗಳು ಈ ತರಹದ ಪ್ಯಾಂಟ್‌ಗಳಿಗೆ ಚೆನ್ನಾಗಿ ಒಪ್ಪುತ್ತವೆ.
- ಇದರ ಜೊತೆ ಹೀಲ್ಸ್ ಚಪ್ಪಲಿಗಳನ್ನು ಧರಿಸಿದರೆ ಇದರ ಅಂದ ಇನ್ನಷ್ಟು ಹೆಚ್ಚುತ್ತದೆ.